## ವ್ಯಾಖ್ಯಾನ

# ಮೂರುತಿಯನೆ ನಿಲ್ಲಿಸೊ

1. **Ref.**: Haridasa Taranga Part-2, Published by M/s. Vyaasaanandadasa Pratishtaana, Bengaluru-98, First Edition 2014, page No. 97.
2. **Author:** Pandith Parashuram Betageri, Bengaluru.

**ಶ್ರೀ ಪುರಂದರ ದಾಸರ ಕೀರ್ತನೆಯ ಚಿಂತನೆ:**

ಯಾವುದೇ ಹೆಚ್ಚಿನ ಪ್ರಯತ್ನವಿಲ್ಲದೇ ನಿರಾಯಾಸವಾಗಿ ಮನಸ್ಸನ್ನು ಒಂದು ವಸ್ತುವಿನಲ್ಲಿ ಏಕಾಗ್ರಗೊಳಿಸುವುದು ಧ್ಯಾನವೆಂದು ಯೋಗ ಸೂತ್ರವು ಹೇಳುತ್ತದೆ. ಯಾವುದನ್ನು ಕುರಿತು ಧ್ಯಾನ ಮಾಡಬೇಕು ಎಂಬ ಜಿಜ್ಞಾಸೆ ಉಂಟಾದರೆ "ಧ್ಯಾನಿಸು ಮನವೆ ಶ್ರೀಹರಿಯ ಪಾದ ಧ್ಯಾನ" ಎಂದು ಗೋಪಾಲದಾಸರು ಹೇಳುತ್ತಾರೆ. "ಧ್ಯಾನವನೆ ಮಾಡು ಬಿಂಬ ಮೂರುತಿಯ ಆನಂದದಲಿ ಕುಳಿತು ಅಂತರಂಗದಲಿ" ಎಂದರವರು.

"ಶ್ರೀ ತರುಣಿ ವಲ್ಲಭನ ಪರಮ ವಿಭೂತಿ ರೂಪವ ಕಂಡ ಕಂಡಲ್ಲಿ ತೆರದಿ ಚಿಂತಿಸುತ ಮನದಲಿ ನೋಡು ಸಂಭ್ರಮದಿ" ಎಂದು ಹರಿಕಥಾಮೃತಸಾರದ ವಿಭೂತಿ ಸಂಧಿಯಲ್ಲಿ ಹೇಳಲಾಗಿದೆ. ಪರಮಾತ್ಮನನ್ನು ಧ್ಯಾನ ಮಾಡಬೇಕಾದರೆ ನಮ್ಮ ಮನಸ್ಸನ್ನು ಆತನಲ್ಲಿ ಸ್ಥಿರವಾಗಿ ಇಡಬೇಕು. ಅದಕ್ಕೆ ಆತನ ಅನುಗ್ರಹವಿಲ್ಲದೆ ನಮ್ಮ ಧ್ಯಾನವು ನಿರಾತಂಕವಾಗಿ ನಡೆಯದು. ಆದುದರಿಂದಲೇ ಶ್ರೀಪುರಂದರದಾಸರು "ನಾ ನಿನ್ನೊಳನ್ಯ ಬೇಡುವುದಿಲ್ಲ ಎನ್ನ ಹೃದಯ ಕಮಲದೊಳು ನಿಂದಿರು ಹರಿಯ" ಎಂದು ಕೇಳಿಕೊಳ್ಳುತ್ತಾರೆ. ಪುರಂದರದಾಸರ ಈ ಕೆಳಗಿನ ಪದವನ್ನು ನೋಡುವಾ.

**ಮೂರುತಿಯನೆ ನಿಲ್ಲಿಸೊ ಮಾಧವ ನಿನ್ನ ॥ ಪ ॥**

ಹೇ ಮಾಧವನೇ ನಿನ್ನ ಸರ್ವಾಲಂಕರ ಭೂಷಣವಾದ ಮೂರುತಿಯನ್ನು ನನ್ನ ಹೃದಯ ಕಮಲದಲ್ಲಿ ನಿಲ್ಲಿಸಬೇಕು.

ಪರಮಾತ್ಮನ ಸುಂದರ ಮೂರುತಿಯನ್ನು ನಮ್ಮ ಜ್ಞಾನೇಂದ್ರಿಯಗಳಿಂದ ಗ್ರಹಿಸಿ ನಮ್ಮ ಮನಸ್ಸಿನಲ್ಲಿ ಸಂಪೂರ್ಣವಾಗಿ ನಿಲ್ಲುವಂತೆ ಮಾಡುವುದು ಮೊದಲ ಹಂತದ ಧ್ಯಾನವೆನಿಸುತ್ತದೆ. ಅಂತಿಮ ಹಂತದ ಧ್ಯಾನವೇ ಶ್ರೀ ಹರಿಯು ನಮ್ಮ ಹೃದಯ ಕಮಲದಲ್ಲಿ ದರುಶನವನ್ನು ಕೊಡುವುದಾಗಿದೆ. ಅದು ಸಮಾಧಿ ಸ್ಥಿತಿಯ ಅಂತಿಮ ಹಂತವೆನಿಸುತ್ತದೆ.

**ಎಳೆ ತುಳಸಿಯ ವನಮಾಲೆಯು ಕೊರಳೊಳು ।**
**ಹೊಳೆವ ಪೀತಾಂಬರದಿಂದಲೊಪ್ಪುವ ನಿನ್ನ ॥ 1 ॥**

ಎಳೆತುಳಸಿಯ ವನಮಾಲೆ ಹಾರವನ್ನು ಕೊರಳಲ್ಲಿ ಧರಿಸಿರುವಂತಹ ಮತ್ತು ಪೀತಾಂಬರನ್ನೂ ಧರಿಸಿ ಸುಂದರಾಕಾರದಿಂದ ಇರುವ ನಿನ್ನ ದರುಶನವನ್ನು ನನ್ನ ಮನದಲ್ಲಿ ಕೊಡುವಂತಹವನಾಗು.

**ಮುತ್ತಿನ ಸರ ನವರತ್ನದುಂಗುರ ವಿಟ್ಟು ।**
**ಮತ್ತೆ ಶ್ರೀಲಕುಮಿಯು ಉರದೊಳೊಪ್ಪುವ ನಿನ್ನ ॥ 2 ॥**

ಮುತ್ತಿನ ಸರವನ್ನು ಕೊರಳಲ್ಲಿ ಧರಿಸಿರುವಂತಹ, ನವರತ್ನದ ಉಂಗುರಗಳನ್ನು ಇಟ್ಟುಕೊಂಡಂತಹ, ಲಕ್ಷ್ಮೀದೇವಿಯವರನ್ನು ವಕ್ಷಸ್ಥಳದಲ್ಲಿ (ಉರದಲ್ಲಿ) ಧರಿಸಿರುವಂತಹ ನಿನ್ನ ಸುಂದರ ಮೂರುತಿಯನ್ನು ನನಗೆ ತೋರಬೇಕು.

**ಭಕ್ತ ಕಲ್ಪತರು ಭಾಗ್ಯದ ಸುರಧೇನು ।**
**ಮುಕ್ತಿದಾಯಕ ಶ್ರೀಪುರಂದರವಿಠಲ ॥ 3 ॥**

ಭಕ್ತರಿಗೆ ಕಲ್ಪವೃಕ್ಷವೂ ಭಾಗ್ಯವನ್ನು ಕೊಡುವಂತಹ ಕಾಮಧೇನುವಿನಂತೆಯೂ ಇರುವಂತಹವನೂ ಕೊನೆಯಲ್ಲಿ ಮುಕ್ತಿಯನ್ನು ಕೊಟ್ಟು – ರಕ್ಷಿಸು ಪರಮಾತ್ಮನೇ ನಿನ್ನ ಮೂರುತಿಯನ್ನು ನನ್ನ ಮನದಲ್ಲಿ ಮತ್ತು ಅಂತಿಮವಾಗಿ ನನ್ನ ಹೃದಯ ಕಮಲದಲ್ಲಿ ನಿಲ್ಲಿಸಬೇಕು. ಕಾಮಧೇನು, ಕಲ್ಪವೃಕ್ಷಾದಿಗಳು, ಕೊಡುವ ಫಲಗಳು ಅತ್ಯಲ್ಪ ಮತ್ತು ನಶ್ವರ, ಆದರೆ ಪರಮಾತ್ಮನು ಕೊಡುವ ಫಲವು ಶಾಶ್ವತ ಎನ್ನುವ ಮಾತು ಸದಾ ಗಮನದಲ್ಲಿರಬೇಕು.

## ಶ್ರೀ ಕೃಷ್ಣಾರ್ಪಣಮಸ್ತು

**ಲೇಖಕರು:** ಪಂ॥ ಶ್ರೀ ಪರಶುರಾಂ ಬೆಟಗೇರಿ